

ಕೊಡಂಗಲೂರು ಜಾತ್ರೆಯಲ್ಲಿ ಸುಪ್ತವಾದುದಕ್ಕೆಲ್ಲ ಮುಕ್ತ ಮಾತಿನ ರೂಪು

ಜನಸಂಖ್ಯಾ ಅನುಪಾತದಲ್ಲೂ 110 ಪುರುಷರಿಗಲ್ಲಿ 100ರಷ್ಟು ಮಹಿಳೆಯರಿದ್ದಾರೆ... ಇತ್ಯಾದಿ ವಾಸ್ತವಾಂಶಗಳನ್ನು ಒರೆಗಲ್ಲಿಗೆ ಹಚ್ಚದೆಯೇ ನಾವು ಭೂತಾನಿನ ಶಿಶ್ನಸಂಸ್ಕೃತಿಯ ಹಿಂದೆ ಗಂಡಸಿನ ಮೇಲ್ಮೆಯಿರಬಹುದೇ ಎನ್ನುವ ಸಂಶಯವನ್ನು ಪರಿಹರಿಸಿಕೊಳ್ಳಲಾಗುವುದಿಲ್ಲ.

ಅದೇನೇ ಇರಲಿ. ಇಂತಹ ವಿಷಯಗಳಲ್ಲಿ 'ಇದಮಿತ್ಥಂ' ಎನ್ನುವ ತೀರ್ಮಾನವನ್ನೂ ಕೊಡಲಾಗುವುದಿಲ್ಲ ಎಂಬುದೂ ಅಷ್ಟೇ ಸತ್ಯ. ಹೀಗಾಗಿ, ಈ ವಿಷಯಕ್ಕೆ ಪೂರಕವೂ ವಿರೋಧಾಭಾಸವೂ ಅನ್ನಿಸುವ ಎರಡು ಸಂಗತಿಗಳನ್ನು ಪ್ರಸ್ತಾವಿಸುತ್ತ ಈ ಲೇಖನ ಮುಗಿಸುತ್ತೇನೆ.

ಭೂತಾನಿನ ಹೋಮ್‌ಸ್ಟೇ ಒಂದರಲ್ಲಿ ನಮಗೆ ಆತಿಥ್ಯ ನೀಡಿದ್ದ ನಡು ವಯಸ್ಕ ಮಹಿಳೆಯಲ್ಲಿ ಅವರ ಆಚಾರದ ಕುರಿತು ಮಾಹಿತಿ ಪಡೆಯುತ್ತ, ಮಾತಿನ ನಡುವೆ, 'ನಿಮಗೆ ಇವುಗಳಿಂದ ಮುಜುಗರವಾಗುವುದಿಲ್ಲವೇ ಹಾಗೂ ನಿಮ್ಮ ಸಂಗಾತಿಯೊಟ್ಟಿಗಿನ ಖಾಸಗಿ ಕ್ರಿಯೆಗೆ ಇದು ಯಾವುದೇ ಪರಿಣಾಮ ಬೀರುವುದಿಲ್ಲವೇ?' ಎನ್ನುವ ಪ್ರಶ್ನೆಯನ್ನು ಕೇಳುತ್ತಲೇ ಆಕೆ ನಾಚಿ ನೀರಾಗಿ ಏನನ್ನೂ ಉತ್ತರಿಸದೇ ಬಾಗಿಲಿನಲ್ಲಿ ಮರೆಯಾದಳು.

ಇನ್ನೊಂದು, ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಘಟನೆ. ಕೇರಳದ ಗೆಳೆಯನೊಬ್ಬ ನೀಡಿದ ಬ್ಯಾಚುಲರ್ ಪಾರ್ಟಿಯೊಂದರಲ್ಲಿ ನಾನೂ ಭಾಗಿಯಾಗಿದ್ದೆ. ಬಹುತೇಕ ಮಲಯಾಳಿಗಳೇ ಇದ್ದ ಆ ಕಾರ್ಯಕ್ರಮದಲ್ಲಿ ಮದ್ಯದ ನಶೆ ಏರುತ್ತಿರುವಂತೆ ಎಲ್ಲರೂ ಸೇರಿ 'ಭರಣಿ ಪಾಟ್ಟು'ವನ್ನು (ಒಂದು ಪ್ರಕಾರದ ಹಾಡನ್ನು) ಹಾಡತೊಡಗಿದರು. ಹಾಡಿನ ಆ ಧಾಟಿ, ಅವರ ಕೈಸನ್ನೆ ಇತ್ಯಾದಿಗಳನ್ನು ಗಮನಿಸಿದ ನನಗೆ, ದಶಕಗಳ ಹಿಂದೆ ನೋಡಿದ ಕೊಡಂಗಲೂರು ದೇವಿಯ ಉತ್ಸವವೇ ನೆನಪಿಗೆ ಬಂತು. ವಿಚಾರಿಸಿದಾಗ, 'ಭರಣಿ ಪಾಟ್ಟು' ಕೊಡಂಗಲೂರು ಜಾತ್ರೆಯಲ್ಲಿ ಹಾಡುವ ಹಾಡೇ ಆಗಿದೆಯೆಂದೂ, ಇಂಥ ಎಣ್ಣೆ ಪಾರ್ಟಿಗಳಲ್ಲೆಲ್ಲ ಅದನ್ನು ಹಾಡಿ ಮಜಾ ತೆಗೆದುಕೊಳ್ಳುವುದು ಇತ್ತೀಚಿನ ಖಯಾಲಿ ಎಂಬುದು ತಿಳಿದುಬಂತು.

●